# ವಚನ ಸಾಹಿತ್ಯದಲ್ಲಿ ವಿವಾಹ ಪರಿಕಲ್ಪನೆ

**ಸುಮ ವೈ.ಎನ್.,* ಅಶ್ವತ್ಥ ಎಸ್.,** & ನಾಗೇಂದ್ರ ಎಚ್. ಗಂಗಾಧರಯ್ಯ*****

**DOI: https://doi.org/10.5281/zenodo.22301988**

**ABSTRACT**

ಈ ಲೇಖನವು ಪ್ರಾಚೀನ ಭಾರತೀಯ ಸಮಾಜದಲ್ಲಿ ರೂಪುಗೊಂಡ ವಿವಾಹ ವ್ಯವಸ್ಥೆಯ ಸ್ವರೂಪ, ಉದ್ದೇಶ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಪರಿಶೀಲಿಸುತ್ತಾ, ವಚನಕಾರರು ವಿವಾಹ ಪರಿಕಲ್ಪನೆಗೆ ನೀಡಿದ ಹೊಸ ಮಾನವೀಯ ಆಯಾಮಗಳನ್ನು ವಿಶ್ಲೇಷಿಸುತ್ತದೆ. ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಹಾಗೂ ಕಲಕೇತಯ್ಯ ಮೊದಲಾದ ವಚನಕಾರರ ಚಿಂತನೆಗಳಲ್ಲಿ ವಿವಾಹವು ಕೇವಲ ಧಾರ್ಮಿಕ ಸಂಸ್ಕಾರ ಅಥವಾ ಸಂತಾನೋತ್ಪತ್ತಿಯ ಸಾಧನವಲ್ಲ; ಅದು ಪರಸ್ಪರ ಪ್ರೀತಿ, ಸಮಾನತೆ, ಸಹಜೀವನ, ನೈತಿಕತೆ, ಹೊಂದಾಣಿಕೆ ಮತ್ತು ಮಾನವೀಯ ಸಂಬಂಧಗಳ ಆಧಾರದ ಮೇಲೆ ರೂಪುಗೊಳ್ಳಬೇಕಾದ ಸಾಮಾಜಿಕ ಸಂಸ್ಥೆಯಾಗಿದೆ. ಅಕ್ಕಮಹಾದೇವಿ ಮತ್ತು ಕಲಕೇತಯ್ಯನವರ ವಚನಗಳ ಮೂಲಕ ರಕ್ತಸಂಬಂಧದ ವಿವಾಹ ಪದ್ಧತಿ, ಸ್ತ್ರೀ–ಪುರುಷ ಅಸಮಾನತೆ ಹಾಗೂ ಸಾಮಾಜಿಕ ಕಟ್ಟುಪಾಡುಗಳನ್ನು ಪ್ರಶ್ನಿಸಿರುವುದನ್ನು ಶರಣರ ವಿವಾಹ ಪರಿಕಲ್ಪನೆಯು ಜಾತ್ಯತೀತ, ವರ್ಗಾತೀತ, ವರ್ಣಾತೀತ ಮತ್ತು ಲಿಂಗಾತೀತ ಮಾನವೀಯ ನೆಲೆಯಲ್ಲಿ ರೂಪುಗೊಂಡಿದ್ದು, ಸಮಾನತೆ, ಸ್ವಾತಂತ್ರ್ಯ, ಪ್ರೀತಿ ಮತ್ತು ಹೊಂದಾಣಿಕೆಯನ್ನು ಆಧರಿಸಿದ ವಿವಾಹ ವ್ಯವಸ್ಥೆಯ ಅಗತ್ಯವನ್ನು ಪ್ರತಿಪಾದಿಸುತ್ತದೆ. ಶರಣರು ಜಾತಿ, ಧರ್ಮ, ರಕ್ತಸಂಬಂಧ ಹಾಗೂ ಬಾಹ್ಯ ರೂಪದಂತಹ ನಿರ್ಬಂಧಗಳನ್ನು ಪ್ರಶ್ನಿಸಿ, ಸಂಗಾತಿಯ ಆಯ್ಕೆಯಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗೆ ಮಹತ್ವ ನೀಡುತ್ತಾರೆ.

**KEYWORDS:** ವಚನ ಸಾಹಿತ್ಯ, ವಿವಾಹ ಪರಿಕಲ್ಪನೆ, ಶರಣರ ಭಕ್ತಿ ವಿವಾಹ, ಅಂತರ್ಜಾತಿ ವಿವಾಹ, ವಿವಾಹ ಸ್ವಾತಂತ್ರ್ಯ.

* **ಸುಮ ವೈ.ಎನ್.,** ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಜಮಖಂಡಿ.

** **ಅಶ್ವತ್ಥ ಎಸ್.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಚಿಂತಾಮಣಿ.

*** **ನಾಗೇಂದ್ರ ಎಚ್. ಗಂಗಾಧರಯ್ಯ,** ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಯೂನಿವರ್ಸಿಟಿ, ಹಾರೋಹಳ್ಳಿ, ಬೆಂಗಳೂರು ದಕ್ಷಿಣ.

ವಿವಾಹ ವ್ಯವಸ್ಥೆಯು ಅತ್ಯಂತ ಪ್ರಾಚೀನವಾದ ವ್ಯವಸ್ಥೆಯಾಗಿದ್ದು, ಮಾನವರು ಅರಿಷಡ್ವರ್ಗಗಳಲ್ಲಿ ಒಂದಾದ ಕಾಮವನ್ನು ವಿವಾಹದ ಮೂಲಕ ಸರ್ವಸಮ್ಮತವಾಗಿ ನೀಗಿಸಿಕೊಳ್ಳುತ್ತಾರೆ. ನ್ಯಾಯ, ಧರ್ಮ, ಸದಾಚಾರ, ಸಂಪ್ರದಾಯಗಳಂತೆ ಧಾರ್ಮಿಕ ಕಟ್ಟುಪಾಡುಗಳಿಂದ ಸ್ತ್ರೀ–ಪುರುಷರ ಕಾಮ ಜೀವನವನ್ನು ಶಾಂತಿಯುತವಾಗಿ ನೆರವೇರಿಸುವ ಸೂತ್ರವೇ ವಿವಾಹ. ಸ್ತ್ರೀ–ಪುರುಷರಿಬ್ಬರೂ ಸತಿಪತಿಯಾಗಲು ವಿವಾಹದ ಒಪ್ಪಿಗೆಯ ಮುದ್ರೆ ಸಮಾಜದಲ್ಲಿ ಅತ್ಯವಶ್ಯಕ. ಪ್ರಾಚೀನ ಕಾಲದಿಂದಲೂ ವಿವಾಹವಿಲ್ಲದೆ ಮೋಕ್ಷವಿಲ್ಲ ಎಂದು ನಂಬಿಕೊಂಡು ಬಂದಿದ್ದರಿಂದ ವಿವಾಹ ವ್ಯವಸ್ಥೆಯು ಮತ್ತಷ್ಟು ಬಲಗೊಂಡಿತು. ಅದು ಭಾರತೀಯ ಸಂಪ್ರದಾಯದಲ್ಲಿ ಅನಿವಾರ್ಯವೆಂಬಂತೆ ತನ್ನ ಸ್ಥಾನವನ್ನು ಬಲಪಡಿಸಿಕೊಂಡಿತು. ಇದು ಸಮಾಜದಲ್ಲಿ ಎಷ್ಟು ಮಾನ್ಯ ಮತ್ತು ಅವಶ್ಯವಾಯಿತೆಂದರೆ, ಪ್ರಾಪ್ತ ವಯಸ್ಕಳಾದ ಹುಡುಗಿಯ ವಿವಾಹವಾಗದಿದ್ದರೆ ಮನೆಗೆ ಹಾಗೂ ಸಮಾಜಕ್ಕೆ ಕಳಂಕವೆಂಬ ಭಾವನೆಯನ್ನು ಮೂಡಿಸತೊಡಗಿತು.

ಭಾರತೀಯ ಧರ್ಮ ಶಾಸ್ತ್ರಗಳಲ್ಲಿ ವಿವಾಹ ಮತ್ತು ಸಂತಾನ ಅಭಿವೃದ್ಧಿಗೆ ಕೊಟ್ಟಷ್ಟು ಮಹತ್ವವನ್ನು ಬೇರಾವ ವಿಷಯಕ್ಕೂ ಕೊಟ್ಟಿಲ್ಲ. ವಿವಾಹದ ಸ್ವರೂಪ ಮತ್ತು ಆಚರಣೆಯಲ್ಲಿ ಹಲವು ಬಗೆಯ ಭಿನ್ನತೆಗಳಿವೆ. ಹಿಂದೂ ವಿವಾಹವು ತನ್ನದೇ ಆದ ವೈಶಿಷ್ಟ್ಯಗಳನ್ನು ಒಳಗೊಂಡಿದ್ದು, ಇದರ ಪ್ರಮುಖ ಉದ್ದೇಶ ಧರ್ಮೋದ್ಧಾರ ಹಾಗೂ ವಂಶಾಭಿವೃದ್ಧಿಯಾಗಿದೆಯೇ ಹೊರತು ಕಾಮ ಪಿಪಾಸೆಯನ್ನು ತಣಿಸುವುದಲ್ಲ. ಭಾರತೀಯರು ವಂಶಾಭಿವೃದ್ಧಿಯನ್ನು ತಮ್ಮ ಆದ್ಯ ಕರ್ತವ್ಯವೆಂದು ನಂಬಿದ್ದಾರೆ. ವಿವಾಹದಿಂದ ಕಾಮ ಮಾತ್ರ ತಣಿಯುವುದಿಲ್ಲ. ಅರ್ಥ, ಧರ್ಮ ಮೋಕ್ಷವೂ ದೊರೆಯುತ್ತದೆ ಎಂಬ ಗಾಢವಾದ ನಂಬಿಕೆಯಿದೆ. ವ್ಯಕ್ತಿಯು ಬ್ರಹ್ಮಚರ್ಯದಿಂದ ಮುಕ್ತನಾಗಿ, ವಿವಾಹದ ಮುಖೇನ ಗೃಹಸ್ಥಾಶ್ರಮವನ್ನು ಪ್ರವೇಶ ಮಾಡಬೇಕಾದದ್ದು ಅನಿವಾರ್ಯ. ನಂತರವೇ ವಾನಪ್ರಸ್ಥ ಮತ್ತು ಸನ್ಯಾಸಗಳನ್ನು ಸ್ವೀಕರಿಸಬೇಕು.

ಕುಟುಂಬವೆಂಬ ಅರಮನೆಗೆ ವಿವಾಹವೇ ಮಹಾದ್ವಾರ, ಸತಿಪತಿಯೇ ಅದರ ಕೀಲಿ ಕೈ. ವ್ಯಕ್ತಿಗೆ ಜೀವನದ ಸಾರ್ಥಕತೆಯನ್ನು, ಸ್ವಾರಸ್ಯವನ್ನು ತಂದುಕೊಡುವ ಸಂಸ್ಥೆ ವಿವಾಹವಾಗಿದೆ. ಕುಟುಂಬದ ಅಗತ್ಯತೆಯನ್ನು ಕಂಡುಕೊಂಡ ಮನುಷ್ಯರು ವಿವಾಹವನ್ನು ಸದೃಢವಾಗಿ ಉಳಿಸಿಕೊಂಡು ಬಂದಿದ್ದಾರೆ. ಈ ವಿವಾಹ ಮಾನವನಲ್ಲಿ ಮಾತ್ರ ಕಂಡುಬರುವ ಅಪೂರ್ವವಾದ ಒಂದು ಸಾರ್ವತ್ರಿಕ ವ್ಯವಸ್ಥೆ. ವಿಶ್ವದಾದ್ಯಂತ ನಾನಾ ರೂಪಗಳಲ್ಲಿ ಈ ವಿವಾಹದ ವರ್ತನೆಗಳು ನಡೆಯುತ್ತಾ ಬಂದಿದೆ. ಭಾರತೀಯ ಸಮಾಜವು ವಿವಾಹಕ್ಕೆ ಪ್ರತ್ಯೇಕ ಹಾಗೂ ಮಹತ್ವಪೂರ್ಣ ಸ್ಥಾನವನ್ನು ನೀಡಿದೆ. ಸಂತಾನೋತ್ಪತ್ತಿ ಸರ್ವಜೀವಿಗಳ ಮೂಲ ಉದ್ದೇಶವಾಗಿದ್ದೂ, ಮಾನವ ಇದರಿಂದ ಹೊರತಾಗಿಲ್ಲ. ಪ್ರಾಣಿ ಸಮುದಾಯಕ್ಕೆ ಸೇರುವ ಮಾನವನು ಇತರ ಪ್ರಾಣಿಗಳಂತೆ ಮುಕ್ತ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದಿಲ್ಲ. ಈ ಲೈಂಗಿಕ ತೃಪ್ತಿಯ ಸಾಕಾರಕ್ಕೆ ಒಂದು ಚೌಕಟ್ಟನ್ನು ತನಗೆ ತಾನೇ ಹಾಕಿಕೊಂಡಿದ್ದಾನೆ. ಆ ಚೌಕಟ್ಟನ್ನೇ ನಾವುಗಳು ವಿವಾಹವೆಂಬ ಹೆಸರಿನಿಂದ ಕರೆದಿದ್ದೇವೆ.

ಹೆಣ್ಣಿನ ಒಡನಾಟವಿಲ್ಲದ ಗಂಡಿನ ಜೀವನ, ಗಂಡಿನ ಒಡನಾಟವಿಲ್ಲದ ಹೆಣ್ಣಿನ ಜೀವನ ಅರ್ಥಹೀನ ಹಾಗೂ ಅಪೂರ್ಣ. ಅದು ಅಪೂರ್ಣವಾಗದಂತೆ ಗಂಡು-ಹೆಣ್ಣಿನ ನಡುವೆ ಉತ್ತಮ ಸಂಬಂಧವನ್ನು ಬೆಸೆಯುವ ಕೊಂಡಿಯಾಗಿ ವಿವಾಹವು ಕೆಲಸ ಮಾಡುತ್ತದೆ. ವಿವಾಹವಾಗದ ಹೊರತಾಗಿ ಲೈಂಗಿಕ ಅನುಭವ ಪಡೆಯಬಹುದಾದರೂ, ಅದಕ್ಕೆ ಸಮಾಜದ ಅನುಮತಿ ದೊರೆಯಬೇಕಾದರೆ ವಿವಾಹವಾಗಲೇಬೇಕು. ವಿವಾಹವೆಂಬ ಸಂಸ್ಥೆಯು ನಾನಾ ರೂಪದಲ್ಲಿದ್ದರೂ, ಅದು ತನ್ನ ಕಾರ್ಯವನ್ನು ನಿರ್ದಿಷ್ಟ ಮತ್ತು ಸ್ಪಷ್ಟ ವಿಚಾರಗಳೊಂದಿಗೆ ನಿರ್ವಹಿಸುತ್ತಾ ಬಂದಿದೆ. ಮಾನವನಿಗೆ ಹುಟ್ಟು, ಬಾಲ್ಯ, ಯೌವನ, ಮುಪ್ಪು, ಸಾವುಗಳು ಸಹಜ ಹಾಗೂ ಖಚಿತ. ಈ ಅವಸ್ಥೆಗಳಲ್ಲಿ ಹುಟ್ಟು ಮತ್ತು ಬಾಲ್ಯವನ್ನು ಹೊರತುಪಡಿಸಿ ಯೌವನ ಅವಸ್ಥೆಯಲ್ಲಿ ವಿವಾಹವೆಂಬ ಅಂಶ ಪ್ರವೇಶವಾಗಿ ಗಂಡು-ಹೆಣ್ಣಿನ ಮನಸ್ಸಿನಲ್ಲಿ ಹೊಸ ಚೈತನ್ಯವನ್ನು ಮೂಡಿಸುತ್ತದೆ.

ವಿವಾಹವೂ ಕುಟುಂಬದಂತೆಯೇ ಪ್ರಧಾನವಾದ ಮತ್ತು ಸಾರ್ವತ್ರಿಕ ಸ್ವರೂಪದ ಸಂಸ್ಥೆಯಾಗಿದೆ. ಇದೊಂದು ಸಾಮಾಜಿಕ ಸಂಸ್ಥೆಯಾಗಿ ಎರಡು ವಿಭಿನ್ನ ಲಿಂಗಗಳಾದ ಸ್ತ್ರೀ ಮತ್ತು ಪುರುಷರ ಲೈಂಗಿಕ ಸಂಬಂಧಕ್ಕೆ ಸಾಮಾಜಿಕ ಮನ್ನಣೆ ದೊರಕಿಸಿಕೊಟ್ಟು, ಸಂತಾನೋತ್ಪತ್ತಿ ಹಾಗೂ ಮಕ್ಕಳ ಲಾಲನೆ-ಪಾಲನೆಗೆ ಅನುವು ಮಾಡಿಕೊಡುತ್ತದೆ. ಮಾನವನ ಸಂತಾನೋತ್ಪತ್ತಿಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದು ಈ ಸಂಸ್ಥೆಯ ಪ್ರಾಥಮಿಕ ಮತ್ತು ಆದ್ಯ ಉದ್ದೇಶವಾಗಿರುತ್ತದೆ. ವಿವಾಹ ಎಂಬ ಶಬ್ದಕ್ಕೆ ನಾನಾ ಅರ್ಥಗಳು ಪ್ರಾಪ್ತವಾಗಿವೆ. ಕನ್ನಡ ವಿಶ್ವಕೋಶದಲ್ಲಿ ವಿವಾಹಕ್ಕೆ ಮದುವೆ, ಲಗ್ನ ಎಂಬ ಪದಗಳ ಉಲ್ಲೇಖವಿದ್ದರೂ, "ಮದುವೆ, ಪರಿಣಯ, ಉಪಮಯ, ಉಪಯಾಮ, ಪಾಣಿಪೀಡನ, ಪಾಣಿಗ್ರಹಣ ಮತ್ತು ಉದ್ವಾಹ" ಎಂಬ ಪರ್ಯಾಯ ಪದಗಳನ್ನು ಬಳಸಲಾಗುತ್ತದೆ. ಇದಲ್ಲದೆ ಲಗ್ನಕಾರ್ಯ, ಮಂಗಳಕಾರ್ಯ, ಅಕ್ಷತಾರೋಹಣಕಾರ್ಯ ಎಂಬ ಪದಗಳು ಸಹ ವಿವಾಹಕ್ಕೆ ಹತ್ತಿರವಾದವುಗಳಾಗಿವೆ. ಇಂಗ್ಲಿಷ್‌ನಲ್ಲಿ ವಿವಾಹಕ್ಕೆ ಪರ್ಯಾಯವಾಗಿ Marriage ಎಂಬ ಪದ ಬಳಕೆಯಲ್ಲಿದೆ. Marriages are Made in Heaven ಎಂಬುದು ಪಾಶ್ಚಾತ್ಯ ಸಂಸ್ಕೃತಿಯ ವಿವಾಹದ ಬಗೆಗಿನ ಒಂದು ಅದ್ಭುತ ತಾತ್ಪರ್ಯ. ವಿವಾಹವೆಂಬುದು ಸಮಾಜಶಾಸ್ತ್ರಜ್ಞರ ಪ್ರಕಾರ ಮಾನವ ನಿರ್ಮಿತ ಸಂಸ್ಥೆಯಾಗಿದೆ. ಆದರೆ ಸಾಮಾನ್ಯ ಜನರು ಮದುವೆ ಸ್ವರ್ಗದಲ್ಲಿಯೇ ನಿಶ್ಚಯವಾಗಿರುತ್ತದೆ ಎಂದು ನಂಬಿಕೊಂಡು ಬಂದಿದ್ದಾರೆ. ಇದು ವಿವಾಹದ ಬಗ್ಗೆ ಜನರು ಇಟ್ಟುಕೊಂಡಿರುವ ಪೂಜ್ಯಭಾವನೆಯನ್ನು ಪ್ರತಿಬಿಂಬಿಸುತ್ತದೆ. ವಿವಾಹದ ಬಗ್ಗೆ ಸಮಾಜ ಶಾಸ್ತ್ರಜ್ಞರು, ದಾರ್ಶನಿಕರು, ಚಿಂತಕರು, ಮಾನವಶಾಸ್ತ್ರಜ್ಞರು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಈ ವ್ಯಾಖ್ಯಾನಗಳನ್ನು ಆಧರಿಸಿ ವಿವಾಹ ಎಂದರೆ ಏನೆಂಬುದನ್ನು ತಿಳಿದುಕೊಳ್ಳಬಹುದು.

ಇದು ಗಂಡು-ಹೆಣ್ಣಿನ ನಡುವೆ ರೂಪುಗೊಂಡಂತಹ ಒಪ್ಪಂದವಾಗಿದ್ದು, ವಿವಾಹಕ್ಕೂ ಮುಂಚೆ ಇದ್ದ ಗಂಡು-ಹೆಣ್ಣು ಎಂಬ ಪದನಾಮದ ಬದಲಾಗಿ, ವಿವಾಹದ ನಂತರ ಗಂಡ-ಹೆಂಡತಿ ಎಂದು ಬದಲಾಗುತ್ತದೆ. ಈ ಪರಿಯ ಬದಲಾವಣೆ

ವಿವಾಹದಿಂದ ಮಾತ್ರ ಸಾಧ್ಯ. ಅದೊಂದು ಅತ್ಯುತ್ತಮವಾದ, ಅಸದೃಶವಾದ ಆಕರ್ಷಣೆಯಾಗಿದೆ. ಪ್ರೀತಿ, ಪ್ರೇಮ ಮತ್ತು ಪ್ರಣಯಗಳ ಪೂರ್ಣ ವಿಕಾಸಕ್ಕೆ ವೇದಿಕೆಯನ್ನು ಸಿದ್ಧಗೊಳಿಸುವ ವ್ಯವಸ್ಥೆಯನ್ನು ವಿವಾಹ ಎನ್ನಬಹುದು.

ವಿವಾಹದ ಉದ್ದೇಶ ಅಥವಾ ಗುರಿ ಕೇವಲ ಹೊಸ ಸಂತತಿ, ಪ್ರಜನನ ಅಥವಾ ಸಂತಾನೋತ್ಪತ್ತಿಗೆ ಮಾತ್ರ ಸೀಮಿತವಾಗಿಸಿಲ್ಲ. ಸತಿ–ಪತಿಯರ ನಡುವೆ ಪರಸ್ಪರ ಭಾವನಾತ್ಮಕ ಸಂಬಂಧವನ್ನು ವೃದ್ಧಿಸುವ ಮೂಲಕ ಕುಟುಂಬ ವ್ಯವಸ್ಥೆಯಲ್ಲಿ ಭದ್ರವಾಗಿ ನೆಲೆಯೂರಲು ಅದು ಅನುವು ಮಾಡಿಕೊಡುತ್ತದೆ. ಮಾನವನ ಬೆಳವಣಿಗೆಗೆ ವಿವಾಹವೂ ಕೂಡಾ ಕುಟುಂಬದಂತೆ ನಿರಂತರವಾಗಿ ಪ್ರಯತ್ನಿಸುತ್ತದೆ. ಮಾನವನಂತೆಯೇ ಎಲ್ಲ ಪ್ರಾಣಿಗಳು ಕೂಡ ಸಂಘ ಜೀವಿಗಳು. ಪ್ರಾಣಿಗಳಲ್ಲಿ ಮುಕ್ತ ಲೈಂಗಿಕ ಕ್ರಿಯೆ ಇದ್ದರೂ, ಅವುಗಳಲ್ಲಿಯೂ ಕೂಡ ತಾಯಿ–ಮಗುವಿನ ಕುಟುಂಬದ ಗುಣ ಇರುತ್ತದೆ. ಅಲ್ಲಿ ತಂದೆಯನ್ನು ಹುಡುಕಲು ಸಾಧ್ಯವಿಲ್ಲ. ಮಾನವರಲ್ಲಿ ಮಾತ್ರ ತಂದೆಯು ಪ್ರಾಧಾನ್ಯತೆ ಪಡೆದಿದ್ದಾನೆ. ಪ್ರಾಣಿಗಳಲಿಲ್ಲದ ವಿವಾಹವೆಂಬ ಅದ್ಭುತ ವ್ಯವಸ್ಥೆ ಮಾನವ ಸಮುದಾಯದಲ್ಲಿದೆ.

ಪ್ರಾಚೀನ ಸಮಾಜದಲ್ಲಿ ಆಚರಣೆಯಲ್ಲಿದ್ದ ಬ್ರಹ್ಮವಿವಾಹ, ದೈವವಿವಾಹ, ಆರ್ಷವಿವಾಹ, ಪ್ರಜಾಪತ್ಯವಿವಾಹ, ಅಸುರವಿವಾಹ, ಗಾಂಧರ್ವವಿವಾಹ, ರಾಕ್ಷಸವಿವಾಹ ಮತ್ತು ಪೈಶಾಚವಿವಾಹಗಳು ಆಧುನಿಕ ಸಮಾಜದಲ್ಲಿ ರೂಢಿಯಲ್ಲಿಲ್ಲ. ಆದರೂ ಪ್ರಜಾಪತ್ಯ ವಿವಾಹ ಮತ್ತು ಗಾಂಧರ್ವ ವಿವಾಹದ ಪಡಿಹಚ್ಚು ಕಂಡುಬರುತ್ತದೆ. ಇಂದಿನ ಸಂಪ್ರದಾಯ ಬದ್ಧ ವಿವಾಹಗಳು ಪ್ರಜಾಪತ್ಯ ವಿವಾಹವನ್ನು ಹೋಲುತ್ತವೆ. ಪ್ರೇಮ ವಿವಾಹಗಳು ಗಾಂಧರ್ವ ವಿವಾಹವನ್ನು ಹೋಲುತ್ತವೆ. ಇಂದು ವಿವಾಹದ ಉದ್ದೇಶಗಳಲ್ಲಿ ಹಲವು ಮಾರ್ಪಾಡುಗಳಾಗಿವೆ. ಗಂಡು–ಹೆಣ್ಣಿನ ನಡುವಿನ ಪರಸ್ಪರ ಹೊಂದಾಣಿಕೆ, ಅನ್ಯೋನ್ಯ ಸಹಜೀವನ, ಶಾಂತಿ, ನೆಮ್ಮದಿ, ಆತ್ಮತೃಪ್ತಿ, ಆತ್ಮಗೌರವಗಳು ವಿವಾಹದ ಮುಖ್ಯ ಭೂಮಿಕೆಯಾಗಿವೆ.

ಪ್ರಾಚೀನ ಸಮಾಜದಲ್ಲಿ ವಿವಾಹವು ಸಮುದಾಯ ಮತ್ತು ಧರ್ಮದ ಭದ್ರಕೋಟೆಯಿಂದ ನಿರ್ಮಿತವಾಗಿತ್ತು. ಅದರಿಂದ ಅಷ್ಟು ಸುಲಭವಾಗಿ ಬಿಡಿಸಿಕೊಳ್ಳಲು ಸಾಧ್ಯವಿರಲಿಲ್ಲ. ಹಾಗಾಗಿ ಗಂಡ ಹೆಂಡತಿ ಕಷ್ಟ–ಸುಖಗಳನ್ನು ಅನುಸರಿಸಿಕೊಂಡು ಹೆಚ್ಚು ಕಾಲ ಕೂಡಿ ಬಾಳುತ್ತಿದ್ದರು. ಅವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿದ್ದುದರಿಂದ ಮನೆಯ ಯಜಮಾನ, ಗಂಡ–ಹೆಂಡತಿಯ ನಡುವೆ ಉದ್ಭವಿಸುವ ಸಮಸ್ಯೆಗಳನ್ನು ಕೂತು ಬಗೆಹರಿಸುತ್ತಿದ್ದರು. ಒಂದು ಹೆಣ್ಣು ಒಬ್ಬ ಪುರುಷನನ್ನು ವಿವಾಹವಾದ ನಂತರ ಆತ ಸತ್ತರೂ ಅವನ ನೆನಪಿನಲ್ಲಿಯೇ ಬದುಕುತ್ತಿದ್ದಳು. ಇಂದು ಕೇಂದ್ರ ಅಥವಾ ವಿಭಕ್ತ ಕುಟುಂಬಗಳೇ ಹೆಚ್ಚಾಗಿರುವುದರಿಂದ ಗಂಡ–ಹೆಂಡತಿಯ ನಡುವಿನ ಮನಸ್ತಾಪಕ್ಕೆ ಪರಿಹಾರ ನೀಡುವ ಮಧ್ಯವರ್ತಿಗಳಿಲ್ಲದೆ ವಿಚ್ಛೇದನಗಳು ಹೆಚ್ಚಾಗುತ್ತಿವೆ. ಗಂಡ ಅಥವಾ ಹೆಂಡತಿ ಸತ್ತರೆ ಮರು ವಿವಾಹವಾಗಲು ಕಾನೂನಿನ ಬೆಂಬಲವಿದೆ. ಹಿಂದೆ ಮರುವಿವಾಹದ ಅವಕಾಶ ಗಂಡಿಗೆ ಮಾತ್ರ ಸೀಮಿತವಾಗಿತ್ತು. ಆಧುನಿಕ

ಪ್ರಜಾಪ್ರಭುತ್ವ ಸಮಾಜದಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಮರುವಿವಾಹದ ಅವಕಾಶವಿದೆ.

ಮಂತ್ರಮಾಂಗಲ್ಯ ಎಂಬುದು ಆಧುನಿಕ ಸಮಾಜದಲ್ಲಿ ಕುವೆಂಪು ಅವರು ರೂಪಿಸಿದ ಸರಳ ವಿವಾಹ ಮಾದರಿಯಾಗಿದೆ. ಈ ರೀತಿಯಲ್ಲಿ ಮದುವೆಯಾಗುವ ವಧು–ವರರು ಅವರ ತಂದೆ–ತಾಯಿ, ಬಂಧುಮಿತ್ರರೂ ಸೇರಿದಂತೆ ಆದಷ್ಟೂ ಕಡಿಮೆ ಜನರ ಸಮ್ಮುಖದಲ್ಲಿ ವಿವಾಹವಾಗಬೇಕಾಗುತ್ತದೆ. ಜೊತೆಗೆ ವಧು–ವರರು ಮದುವೆ ಸಮಯದಲ್ಲಿ ಹಿರಿಯರು ಉಪದೇಶಿಸುವ ನಡವಳಿಕೆಯ ಸಂಹಿತೆಗೆ ಅನುಗುಣವಾಗಿ ನಡೆದುಕೊಳ್ಳಬೇಕಾಗುತ್ತದೆ. ಈ ವಿವಾಹ ಸಂಹಿತೆಯು ಪ್ರತಿ ವಧು–ವರರಿಗೂ ನಿರ್ದಿಷ್ಟ ಸಾಮಾಜಿಕ ಮೌಲ್ಯಗಳನ್ನು ಬೋಧಿಸುತ್ತದೆ. ಮಂತ್ರಮಾಂಗಲ್ಯವು ಸರಳ ವಿವಾಹ ವಿಧಿಯಾಗಿ ರೂಪಿಸಿರುವುದರಿಂದ ಆಡಂಬರಕ್ಕೆ ಆಸ್ಪದವಿರುವುದಿಲ್ಲ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವರದಕ್ಷಿಣೆ, ವಧುದಕ್ಷಿಣೆಯನ್ನು ಯಾರೂ ಸ್ವೀಕರಿಸುವಂತಿಲ್ಲ. "ಮಂತ್ರಮಾಂಗಲ್ಯ ವಿವಾಹವು ಗುರುಹಿರಿಯರ ಮತ್ತು ಬಂಧುಬಾಂಧವರ ಸಮ್ಮುಖದಲ್ಲಿ ನಡೆಯುವ ಪವಿತ್ರ ವಿಧಿಯಾದುದರಿಂದ ಎರಡೂ ಕಡೆಯಿಂದ ಒಟ್ಟು ಇನ್ನೂರು ಜನರನ್ನು ಮೀರದಂತೆ ಆಹ್ವಾನಿಸಬೇಕು. ಸಂಪ್ರದಾಯದಂತೆ ಇದ್ದಬದ್ದವರನ್ನೆಲ್ಲಾ ಆಹ್ವಾನಿಸಿ ದೊಂಬಿ ಎಬ್ಬಿಸುವುದು ಮಂತ್ರಮಾಂಗಲ್ಯದ ಪಾವಿತ್ರ್ಯವನ್ನೂ ಗಾಂಭೀರ್ಯವನ್ನೂ ಸಂಪೂರ್ಣ ನಾಶ ಮಾಡುತ್ತದೆ." ಎಂದು ಕುವೆಂಪು ಅವರು ಅಭಿಪ್ರಾಯ ಪಡುತ್ತಾರೆ. ಶರಣರು ಇದೇ ಬಗೆಯ ಸರಳ ವಿವಾಹವನ್ನು ಭಕ್ತಿ ವಿವಾಹದ ನೆಲೆಯಲ್ಲಿ ರೂಪಿಸುತ್ತಾರೆ.

**ವಚನಕಾರರಲ್ಲಿ ವಿವಾಹ**

ಭಾರತೀಯ ಸಮಾಜದಲ್ಲಿ ವಿವಾಹಕ್ಕೆ ವಿಶಿಷ್ಟ ಸ್ಥಾನವಿದೆ. ಇಲ್ಲಿ ಹಲವಾರು ಧರ್ಮ, ಜಾತಿ, ಸಂಸ್ಕೃತಿ, ಭೌಗೋಳಿಕ ವ್ಯತ್ಯಾಸವಿರುವುದರಿಂದ ವಿವಾಹವೂ ಕೂಡಾ ವಿಭಿನ್ನತೆಯಿಂದ ಕೂಡಿದೆ. ಭಾರತೀಯರು ವಿವಾಹವನ್ನು ಧಾರ್ಮಿಕ ಸಂಸ್ಕಾರ ಎಂದು ಭಾವಿಸಿ ಅದನ್ನು ಸಂಭ್ರಮಿಸುತ್ತಾ, ಧಾರ್ಮಿಕ ರೀತಿ–ನೀತಿಗಳನ್ನು ಸಂಪ್ರದಾಯಬದ್ಧವಾಗಿ ಆಚರಿಸುವ ಈ ವಿವಾಹದಲ್ಲಿ ಗಂಡು ಹೆಣ್ಣಿನ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿ ನೂರು ಕಾಲ ಸುಖವಾಗಿ ಬಾಳಿ ಎಂದು ಹಾರೈಸುತ್ತಾರೆ. ಈ ವಿವಾಹವು ಆಧುನಿಕ ಸಂದರ್ಭದಲ್ಲಿ ಸಾಕಷ್ಟು ಪರಿವರ್ತನೆಯನ್ನು ಹೊಂದಿದೆ. ಒಂದು ಜಾತಿಯ, ಒಂದು ಧರ್ಮದ, ಒಂದು ಸಂಸ್ಕೃತಿಯ ಒಳಗೆ ನಡೆಯುತ್ತಿದ್ದ ವಿವಾಹವೂ, ಇಂದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಅಂತರ್ಜಾತಿ, ಅಂತರ್ ಸಂಸ್ಕೃತಿಯ ವಿವಾಹಗಳು ಸಂಭವಿಸುತ್ತಿದ್ದು, ಅವು ಸಮಾಜದಿಂದ ಒಪ್ಪಿತವಾಗಲು ಕಸರತ್ತು ನಡೆಸುತ್ತಿವೆ.

ಶರಣರು ವಿವಾಹ ಕ್ರಮ ಹೇಗಿರಬೇಕು ಎಂಬುದನ್ನು ಹೇಳುತ್ತಾ, ಚೆನ್ನಬಸವಣ್ಣ, ಮಾದಾರ ಧೂಳಯ್ಯ ಮೊದಲಾದವರು ಅದನ್ನು 'ಭಕ್ತಿವಿವಾಹ' ಎಂದು ಕರೆಯುತ್ತಾರೆ. ಈ ಮಾದರಿಯ ವಿವಾಹವನ್ನು ಸರಳವಿವಾಹ ಎಂತಲೂ ಕರೆಯಬಹುದು. ಶರಣರ ಭಕ್ತಿವಿವಾಹವು, ಶುಭದಿನ, ಶುಭಲಗ್ನ, ಶುಭಮುಹೂರ್ತ,

ರಾಶಿಬಲ, ತಾರಾಬಲ, ಜಾತಕ ಇತ್ಯಾದಿಗಳನ್ನು ಒಪ್ಪದೆ, ಗಂಡು ಮತ್ತು ಹೆಣ್ಣು ಭಕ್ತಗಣದ ಸಾಕ್ಷಿಯಾಗಿ ವಿವಾಹವಾಗುವುದನ್ನು ಮಾನ್ಯಮಾಡುತ್ತದೆ. "ಭಕ್ತನ ಮನ ಹೆಣ್ಣಿನೊಳಗಾದಡೆ ವಿವಾಹವಾಗಿ ಕೂಡುವುದು" ಎಂದು ಸಿದ್ಧರಾಮ ಹೇಳಿರುವುದು, ಗಂಡು-ಹೆಣ್ಣಿನ ಸಹಜ ಪ್ರವೃತ್ತಿಯನ್ನು ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಪ್ರೋತ್ಸಾಹಿಸಿದಂತೆ ಕಾಣುತ್ತದೆ. ಈ ಬಗೆಯ ಆಲೋಚನೆಯನ್ನು ಬಸವಣ್ಣ, ನಿರಾಲಂಬ ಪ್ರಭುದೇವ, ಸಿದ್ಧರಾಮನ ವಚನಗಳಲ್ಲೂ ಕಾಣಬಹುದು. ಚೆನ್ನಬಸವಣ್ಣ ಭಕ್ತಿವಿವಾಹವನ್ನು ತಿರಸ್ಕರಿಸುವವರಿಗೆ ಶರಣ ಶ್ರೇಷ್ಟವಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದವಿಲ್ಲ ಎನ್ನುತ್ತಾನೆ.

ನಿಜವೀರಶೈವಾರಾಧಕರಾದ ಶರಣರು ಭಕ್ತಿವಿವಾಹ ಅಥವಾ ಭಕ್ತಿಕಲ್ಯಾಣದ ನಿಯಮವನ್ನು ಪಾಲಿಸಬೇಕಾದ್ದು ಪ್ರತಿಯೊಬ್ಬ ಶಿವಭಕ್ತನ ಆದ್ಯ ಕರ್ತವ್ಯ. ಇದನ್ನು ಹೊರತಾಗಿ ಶೈವ ಕೃತಕ ಶಾಸ್ತ್ರದಂತೆ ಶಕುನ, ಸ್ವಪ್ನ, ಸಾಮುದ್ರಿಕ ಲಕ್ಷಣ, ಸ್ತ್ರೀ-ಪುರುಷ ಜಾತಕ, ಚರಿತ್ರೆ, ಕಾಮಶಾಸ್ತ್ರ ಕಲಾಭೇದ, ರಾಶಿಫಲ, ನಕ್ಷತ್ರಯೋಗ, ಕರಣ, ದಿನ, ತಿಥಿ, ಲಗ್ನ, ಮುಹೂರ್ತ ನೋಡುವ, ಪಾರ್ವನ ಮೂಲಕ ಧಾರೆ ಎರೆಸಿಕೊಳ್ಳುವ ಲೋಕದ ಮನುಜರಂತೆ, ಶಿವಭಕ್ತರಾದವರು ನಡೆದುಕೊಳ್ಳಬಾರದು ಎಂಬ ನಿಯಮವನ್ನು ಚೆನ್ನಬಸವಣ್ಣ ರೂಪಿಸುತ್ತಾನೆ. "ವಿಪ್ರಗೆ ಕೈ ಮುಗಿದು ಕಾಣಿಕೆಯನಿಕ್ಕಿ ತನ್ನ ಹೆಸರ ಹೇಳಿ, ಸೂರ್ಯಬಲ, ಚಂದ್ರಬಲ, ಬೃಹಸ್ಪತಿಬಲ, ನವಗ್ರಹಬಲವ ಕೇಳುವವರಿಗೆ ಎಲ್ಲಿಯದೋ ಶಿವಭಕ್ತಿ?" ಎಂದು ಪ್ರಶ್ನಿಸುತ್ತಾನೆ. ಕೆಲವು ದೃಷ್ಟಾಂತಗಳ ಮೂಲಕ ಸೂರ್ಯ, ಚಂದ್ರ, ಬೃಹಸ್ಪತಿ ಮತ್ತು ನವಗ್ರಹ ಬಲಗಳ ಕೌಟುಂಬಿಕ ದುರಂತವನ್ನು ವಿವರಿಸುತ್ತಾನೆ.

ಗಂಡಾಗಲಿ, ಹೆಣ್ಣಾಗಲಿ ಮದುವೆಗೂ ಮುಂಚಿತವಾಗಿ ಅವರವರ ಇಚ್ಛೆಯನುಸಾರ ಜೀವಿಸಬಹುದು. ಪ್ರೀತಿಸಿದವರನ್ನೇ ವಿವಾಹವಾಗಲು ಪ್ರಯತ್ನಿಸಬಹುದು. ಆ ಪ್ರಯತ್ನ ಯಶಸ್ವಿಯಾದರೆ ಒಳ್ಳೆಯದು. ಒಂದು ವೇಳೆ ಅದು ಸಾಧ್ಯವಾಗದಿದ್ದರೆ ತಾವು ಯಾವ ವ್ಯಕ್ತಿಯನ್ನು ವಿವಾಹವಾಗುತ್ತಾರೋ ಅವರಿಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕು. ಸಮರ್ಪಣೆ ಎಂದರೆ ಗಂಡ ತನ್ನ ಹೆಂಡತಿಯಲ್ಲಿ, ಹೆಂಡತಿ ತನ್ನ ಗಂಡನಲ್ಲಿ ಮಾತ್ರ ಕಾಯಾ, ವಾಚಾ, ಮನಸಾ ಬದ್ಧತೆಯನ್ನು ಕಾಯ್ದುಕೊಳ್ಳಬೇಕು. ಹಡಪದ ಅಪ್ಪಣ್ಣ ಹೇಳುವ, "ಪತಿವ್ರತೆಯಾದವಳಿಗೆ ತನ್ನ ಪುರುಷನ ನೆನೆಹಲ್ಲದೆ ಅನ್ಯರ ನೆನೆವಳೆ? ವೇಶಿಯಂತೆ ಹಲಬರು ನೆಂಟರೆ?" ಎನ್ನುತ್ತಾನೆ.

ಬಸವಣ್ಣ ಹಲವು ವಚನಗಳಲ್ಲಿ ಪರಸ್ತ್ರೀ ಬಗೆಗಿನ ತನ್ನ ನಿಲುವುಗಳನ್ನು ಅಭಿವ್ಯಕ್ತಿಸುತ್ತಾನೆ. ಇದೊಂದು ನೈತಿಕ ಜವಾಬ್ದಾರಿ ಎಂದು ಪರಿಗಣಿಸುತ್ತಾನೆ. ಕೇವಲ ಆಸ್ತಿ ಮಾಡುವ, ಬೇರೊಬ್ಬರನ್ನು ನಾಶಮಾಡುವ ಛಲಗಾರಿಕೆಯೆ ಹೆಚ್ಚಿರುವ ಜನರಿಗೆ, ಪರ-ಸ್ತ್ರೀಯನ್ನು ಕಾಮಭಾವನೆಯಿಂದ ನೋಡಬಾರದೆಂಬ ಛಲವೂ ಇರಬೇಕು. ಹಾಗಾಗಿ "ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ" ಛಲಬೇಕು ಎನ್ನುವ

ಮೂಲಕ ವ್ಯಕ್ತಿ ತನ್ನ ಆಂತರ್ಯದಲ್ಲಿ ದೃಢ ನಿರ್ಧಾರ ಕೈಗೊಳ್ಳಬೇಕು ಎನ್ನುತ್ತಾನೆ. ಮನಸ್ಸನ್ನು ಗೆದ್ದವನು ಜಗತ್ತನ್ನು ಗೆದ್ದಂತೆ. ಮನಸ್ಸನ್ನು ನಿಯಂತ್ರಿಸಿ ತನಗೆ ಬೇಕಾದ ಹಾಗೆ ಬಳಸಿಕೊಳ್ಳುವುದೆ ಒಂದು ಸಾಧನೆ. ಮನಸ್ಸಿನ ಸ್ವೇಚ್ಛೆ ಕೆಲವೊಮ್ಮೆ ವ್ಯಕ್ತಿತ್ವವನ್ನು ಹರಣ ಮಾಡಿಬಿಡುತ್ತದೆ. ಹಾಗಾಗಿ ಪರವಧುವಿನ ವಿಚಾರದಲ್ಲಿ ಮನಸ್ಸನ್ನು ಹತೋಟಿಯಲ್ಲಿ ಇಡಬೇಕಾದ್ದು ಶಿವಶರಣರ ಆದ್ಯ ಕರ್ತವ್ಯವಾಗಿದೆ.

"ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಪರವಧುವನು ಮಹಾದೇವಿಯೆಂಬೆ ಕೂಡಲಸಂಗಮದೇವಾ" ಎನ್ನುತ್ತಾನೆ. ಪರವಧುವನ್ನು 'ಮಹಾದೇವಿ' ಎಂದು ಕರೆಯುವ ಮೂಲಕ ಅವಳಲ್ಲಿ ತಾಯಿಯನ್ನು ಕಾಣುತ್ತಾನೆ. ಮನಸ್ಸು ಎಂಬುದು ಕೆಲವೊಮ್ಮೆ ಮನುಷ್ಯನ ನಿಯಂತ್ರಣವನ್ನು ಮೀರಿ ವರ್ತಿಸುತ್ತದೆ. ಇದರಿಂದ ಒಳಿತು ಆಗಬಹುದು, ಕೆಡುಕು ಆಗಬಹುದು. ಪರಸತಿಯ ವಿಚಾರವು ಕೆಡುಕಾದ್ದರಿಂದ ಆ ಕೃತ್ಯಕ್ಕೆ ಮನ ಎಳೆಸದಂತೆ ನಿಗ್ರಹಿಸುವ ಶಕ್ತಿಯನ್ನು ಬೇಡುತ್ತಾನೆ. ಮನುಷ್ಯ ಎಂದೂ ಪರಿಪೂರ್ಣನಲ್ಲ ಎಂಬುದನ್ನು ಬಸವಣ್ಣ ಅರಿತವನಾಗಿದ್ದಾನೆ. ಹಾಗಾಗಿ "ಪರಸತಿಯರ ರತಿಗೆ ಮನ ಹಾರದಂತೆ...ಎನ್ನ ಪ್ರತಿಪಾಲಿಸು ಕೂಡಲಸಂಗಮದೇವಾ" ಎಂದು ಬೇಡಿಕೊಳ್ಳುತ್ತಾನೆ.

ಬಸವಣ್ಣ ಸಾಮಾಜಿಕ ಕಾಳಜಿ ವಹಿಸುವ ನಿಟ್ಟಿನಲ್ಲಿ "ನೋಡಲಾಗದು ನುಡಿಸಲಾಗದು ಪರಸ್ತ್ರೀಯ ಬೇಡ ಕಾಣಿರೋ ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ ಕಾಣಿರೋ ಒಂದಾಸೆಗೆ ಸಾಸಿರ ವರುಷ ನರಕದಲದ್ದುವ ಕೂಡಲಸಂಗಮದೇವ" ಎನ್ನುವ ಮೂಲಕ ಸಮಾಜವನ್ನು ಎಚ್ಚರಿಸುತ್ತಾನೆ. ಬಸವಣ್ಣನಂತೆ ಶರಣರೆಲ್ಲರೂ ಕೂಡ ಸಾಮಾಜಿಕ ಕಳಕಳಿಯಿಂದಲೇ ಬದುಕಿದ್ದವರು. ಪತಿಯಾದವನು ಅನ್ಯಸ್ತ್ರೀಯರನ್ನು ಮಾತೆಯಾಗಿ ಸ್ವೀಕರಿಸಬೇಕು. ಆಗ ಮಾತ್ರ ಯಾವ ಹೆಣ್ಣು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವುದಿಲ್ಲ. ಈ ಬಗೆಯ ಆಲೋಚನೆಯಲ್ಲಿ ಸಿದ್ಧರಾಮ, "ಜ್ಞಾನಿಗಳು ತಾವಾದ ಬಳಿಕ ಅನ್ಯಸ್ತ್ರೀ ತನ್ನ ಮಾತೆಯಂತಿರಬೇಕು ಕಪಿಲಸಿದ್ಧಮಲ್ಲಿಕಾರ್ಜುನಾ" ಎನ್ನುತ್ತಾನೆ. ಆ ಮೂಲಕ ನೀವು ಜ್ಞಾನಿಗಳಾಗುವಿರೋ? ಅಥವಾ ಅಜ್ಞಾನಿಗಳಾಗುವಿರೋ? ಎಂದು ನಮ್ಮನ್ನೇ ಪ್ರಶ್ನಿಸಿದಂತಿದೆ.

ಪ್ರಾಚೀನ ಸಮಾಜವು ವಿವಾಹದ ವಿಚಾರದಲ್ಲಿ ಗಂಡಿಗೆ ಇದ್ದಷ್ಟು ಸ್ವಾತಂತ್ರ್ಯ ಹೆಣ್ಣಿಗಿರಲಿಲ್ಲ. ಆಕೆ ಭೋಗದ ವಸ್ತುವಾಗಿ ಪರಿಗಣಿಸಲ್ಪಟ್ಟಿದ್ದಳು. ಶರಣರು ಈ ಎಲ್ಲ ಬಗೆಯ ಜಟಿಲತೆಗಳನ್ನು ಹೋಗಲಾಡಿಸಿ ವಿವಾಹಕ್ಕೆ ಹೊಸ ರೂಪವನ್ನು ಕೊಟ್ಟರು. ವಿವಾಹವನ್ನು ಸರಳ ಹಾಗೂ ಸುಭದ್ರಗೊಳಿಸುವ ಪ್ರಯತ್ನಗಳು ಶರಣರಿಂದ ಜರುಗಿದವು. ಮಾನವೀಯ ನೆಲೆಯಲ್ಲಿ ಆಲೋಚಿಸುವ ಶರಣರು ಅಂತರ್ಜಾತಿ ವಿವಾಹಕ್ಕೆ ನಾಂದಿ ಹಾಡಿದರು. ಶರಣರ ವಿವಾಹದ ಮೌಲ್ಯಗಳು ಸರ್ವಕಾಲಿಕವಾದವು.

ಶರಣರು ವಿವಾಹ ಪೂರ್ವ ಸಂಗಾತಿಯ ಆಯ್ಕೆಯಲ್ಲಿ ಕೆಲವು ಮಾನದಂಡಗಳನ್ನು ಅನುಸರಿಸುತ್ತಾರೆ. ಅವು ಯಾವುದೇ ಜಾತಿ, ಧರ್ಮ, ಸಂಪ್ರದಾಯಗಳಿಗೂ ಒಳಗಾಗದೆ, ಮಾನವೀಯ ನೆಲೆಯಲ್ಲಿ ರೂಪುಗೊಂಡ

ಮಾನದಂಡಗಳಾಗಿವೆ. ಅವುಗಳೆಂದರೆ:

- ರಕ್ತ ಸಂಬಂಧಗಳಿಂದ ಹೊರತಾದ ಗಂಡು ಹೆಣ್ಣಿನ ಆಯ್ಕೆ
- ಗಂಡು ಮತ್ತು ಹೆಣ್ಣಿಗೆ ಸಮಾನ ಆಯ್ಕೆಯ ಸ್ವಾತಂತ್ರ್ಯ
- ಇಚ್ಛೆಯ ಆಯ್ಕೆಗೆ ವರ್ಣದ ಚೌಕಟ್ಟು
- ಸಮಾನ ಅಭಿರುಚಿಯ ಆಯ್ಕೆ
- ಜಾತಿಯ ಎಲ್ಲೆಯನ್ನು ಮೀರುವಿಕೆ

ರಕ್ತ ಸಂಬಂಧದಲ್ಲಿ ವಿವಾಹವಾಗುವ ಅವೈಜ್ಞಾನಿಕ ಪದ್ಧತಿಯನ್ನು ಶರಣರು ಕೂಡ ತಿರಸ್ಕರಿಸುತ್ತಾರೆ. ನಮ್ಮ ಹಿಂದೂ ಸಂಪ್ರದಾಯದ ಪ್ರಕಾರ ತಂದೆಯ ಸಹೋದರರನ್ನು ದೊಡ್ಡಪ್ಪ, ಚಿಕ್ಕಪ್ಪ ಎಂದು ತಂದೆಯ ಸಮಾನವಾಗಿ ಕಾಣಲಾಗುತ್ತದೆ. ಅವರ ಮಕ್ಕಳೊಂದಿಗೆ ಸಹೋದರ, ಸಹೋದರಿಯ ಸಂಬಂಧವನ್ನು ಕಲ್ಪಿಸಿಕೊಳ್ಳಲಾಗುತ್ತದೆ. ಆದರೆ ತಂದೆಯ ಸಹೋದರಿಯರನ್ನು ಅತ್ತೆ ಎಂದು ಕರೆಯಲಾಗುತ್ತದೆ. ಅವರ ಮಕ್ಕಳೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಳ್ಳಲು ಅವಕಾಶವಿದೆ. ಹೀಗೆ ತಂದೆಯ ಸಹೋದರ ಮಕ್ಕಳೊಂದಿಗೆ ನಿಷಿದ್ಧವಾದ ವೈವಾಹಿಕ ಸಂಬಂಧ, ತಂದೆಯ ಸಹೋದರಿಯರ ಮಕ್ಕಳೊಂದಿಗೆ ಸ್ವೀಕಾರಾರ್ಹವಾಗಿದೆ. ಇಂತಹ ದ್ವಂದ್ವ ಹಾಗೂ ಅವೈಜ್ಞಾನಿಕ ವೈವಾಹಿಕ ಕ್ರಮವನ್ನು ಅಕ್ಕಮ್ಮ, ಕಲಕೇತಯ್ಯರಂತಹ ಶರಣರು ಪ್ರಶ್ನಿಸುತ್ತಾ ವಿರೋಧಿಸುತ್ತಾರೆ.

ವಚನ ಸಾಹಿತ್ಯದಲ್ಲಿ ಅಕ್ಕಮ್ಮನ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಆಕೆಯ ವಚನಗಳು ಶೀಲ, ವ್ರತ, ನೇಮ, ಆಚಾರ ಇವುಗಳನ್ನು ಕೇಂದ್ರವಾಗಿಟ್ಟುಕೊಂಡು ರಚನೆಗೊಂಡಿವೆ. 'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿರುವ ಅಕ್ಕಮ್ಮ, ತನ್ನನ್ನು ಕಾಡಿದ ಹಲವು ಪ್ರಶ್ನೆಗಳನ್ನು ವಚನರೂಪದಲ್ಲಿ ಕೇಳುಗರ ಮತ್ತು ಓದುಗರ ಮುಂದಿಡುತ್ತಾಳೆ. ಆ ಪ್ರಶ್ನೆಗಳು ನಮ್ಮ ಸಾಮಾಜಿಕ ಅಥವಾ ಕೌಟುಂಬಿಕ ನಿಯಮಗಳನ್ನು ಮರು ಅರ್ಥೈಸಿಕೊಳ್ಳಬೇಕೆಂಬ ಆಲೋಚನೆಗೆ ಒಡ್ಡುತ್ತವೆ. ನಮ್ಮ ಪರಂಪರೆಯಿಂದ ಅನುಸರಿಸಿಕೊಂಡು ಬಂದಿರುವಂತಹ ಮತ್ತು ಇಂದಿಗೂ ಅನುಸರಿಸುತ್ತಿರುವಂತಹ, ಮೌಢ್ಯದ ನೆಲೆಯಲ್ಲಿ ರೂಪುಗೊಂಡಿರುವ ರಕ್ತಸಂಬಂಧಿ ವಿವಾಹವನ್ನು ಅಕ್ಕಮ್ಮ ಹನ್ನೆರಡನೇ ಶತಮಾನದಲ್ಲಿಯೇ ಪ್ರಶ್ನಿಸುತ್ತಾಳೆ.

**"ತಂದೆಯ ಒಂದಾಗಿ ಬಂದ**
**ಸಹೋದರ ಗಂಡೆಲ್ಲ ತಂದೆಯಾದ ಕಾರಣ,**
**ಆ ತಂದೆಯ ಒಡಹುಟ್ಟಿದ ಹೆಣ್ಣೆಲ್ಲ ತನಗೆ ತಾಯಲ್ಲವೇ?**
**ಆಕೆಯನತ್ತೆಯೆಂಬ ಜಗದ ತೆತ್ತುಮತ್ತರ ನಾವರಿಯೆವಯ್ಯಾ.**
**ಮತ್ತೆ, ತಾವು ಬಳಸುವುದಕ್ಕೆ ಗೊತ್ತಿಲ್ಲವೆಂದಾಕೆಯ ಮಗಳನು**

**ಸತಿಯನೆ ಮಾಡಿಕೊಳ್ಳಬಹುದೆ?**
**ಹೆತ್ತತಾಯ ಮಗಳ ಮಗಳು ಒಡಹುಟ್ಟಿದವಳಲ್ಲವೆ?**
**ಸೊಸೆ ಮಾವನೆಂದು ಸತಿಯಂ ಮಾಡಿಕೊಂಬರು ನೋಡಾ.**
**ಸೊಸೆಗೂ ಮಾವಂಗೂ ಸಂಸರ್ಗ ನಿಲ್ಲುವುದೆ?**
**ಸತ್ಯಕ್ಕೆ ಸಮವಲ್ಲ, ಭಕ್ತಿಗೆ ಇದಿರಿಲ್ಲವೆಂದರಿದು ಮತ್ತೆ**
**ಜಗದಲ್ಲಿ ಹೊತ್ತು ಹೋರಲೇಕೆ?**
**ಇದು ಆಚಾರಕ್ಕೆ ನಿಶ್ಚಯ, ಆಚಾರವೆ ಪ್ರಾಣವಾದ ರಾಮೇಶ್ವರಲಿಂಗಕ್ಕೆ**
**ಕೊಳುಕೊಡೆಯೆಂಬ ಸೂತಕ ಸದಾಚಾರದಲ್ಲಿ ಅಡಗಿತ್ತು''**

ಎಂದು ಸಂಬಂಧಗಳು ಲಯಬದ್ಧವಾಗಿ ಹೆಣೆದುಕೊಂಡಿರುವುದನ್ನು ಪ್ರಶ್ನಿಸುತ್ತಾಳೆ. ಪಿತೃ ಪ್ರಧಾನ ಹಾಗೂ ಪಿತೃವಂಶೀಯ ಕುಟುಂಬ ಪದ್ಧತಿ ಹುಟ್ಟುಹಾಕಿರುವ ಸೋದರಿಕೆ ವಿವಾಹವು ಕೂಡ ಹೆಣ್ಣನ್ನು ಅಧಿಕಾರ ಕಕ್ಷೆಗೊಳಪಡಿಸುವ ಅಸ್ತ್ರವಾಗಿದ್ದು, ಮತೀಯ ಪ್ರಾಬಲ್ಯಕ್ಕಾಗಿ ನಡೆದ ಸೆಣಸಾಟದಲ್ಲಿ ಮಹಿಳೆ ಅತ್ಯಂತ ಅಮೂಲ್ಯ ಸಂಪನ್ಮೂಲ ವಸ್ತುವಾಗಿ ಪರಿಗಣಿತಳಾಗುತ್ತಾಳೆ.

ಅಕ್ಕಮ್ಮನಂತೆ ಸಂಬಂಧಗಳ ವೈರುಧ್ಯವನ್ನು ಪ್ರಶ್ನಿಸುವ ಮತ್ತೊಬ್ಬ ವಚನಕಾರ ಕಲಕೇತಯ್ಯ. ಈತ ಓರ್ವ ಜನಪದ ಕಲಾವಿದ ಎಂದು ವಿದ್ವಾಂಸರು ಗುರುತಿಸುತ್ತಾರೆ. 'ಮೇಖಲೇಶ್ವರಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿರುವ ಈತನನ್ನು ಬಸವಣ್ಣ ''ಕಲಕೇತನಂತಪ್ಪ ತಂದೆ ನೋಡೆನಗೆ'' ಎಂದು ಸ್ಮರಿಸುತ್ತಾನೆ. ಇದು ಶರಣ ಸಮುದಾಯದಲ್ಲಿ ಆತನ ಸ್ಥಾನ ಏನೆಂಬುದನ್ನು ತಿಳಿಸುತ್ತದೆ. ಆತನ ವಚನಗಳು ಕೂಡ ಓದುಗರ ಗಮನವನ್ನು ತನ್ನತ್ತ ಸೆಳೆಯುವ ಸಾಮರ್ಥ್ಯವನ್ನು ಹೊಂದಿವೆ. ರಕ್ತಸಂಬಂಧಗಳನ್ನು ಕುರಿತು ಮಾತನಾಡುತ್ತಾ,

**''ನಾನು ನಿನಗೆ ತಂಗಿಯ ಕೊಟ್ಟು ನೀನೆನಗೆ ಮೈದುನನಾದೆ.**
**ನಾನು ನಿನಗೆ ಅಕ್ಕನ ಕೊಟ್ಟು ನೀನೆನಗೆ ಭಾವನಾದೆ.**
**ನಾನು ನೀನೂ ಏನಹರೆಂಬುದ ತಿಳಿದು**
**ಅಣ್ಣನಿಗೆ ತಂಗಿ, ಅಕ್ಕನಿಗೆ ತಮ್ಮ**
**ಇವರಿಬ್ಬರೂ ದುಷ್ಟದಲ್ಲಿ ಒಡಹುಟ್ಟಿದರಾದ ಮತ್ತೆ**
**ತಂಗಿಯ ಮಗಳು ಸೊಸೆಯಾಗಿ,**
**ಅಕ್ಕನ ಮಗ ಅಳಿಯನಾದ ಚಿತ್ರವ ನೋಡಾ!**
**ಒಂದು ಯೋನಿಯಲ್ಲಿ ಬಂದುದನರಿಯದೆ,**
**ನಿನ್ನ ಒಡಹುಟ್ಟಿದವಳಿಗೆ ನೀ ಗಂಡನಾಗಿ,**
**ಎನಗೆ ನೀ ಬಾವನಾದ ಪರಿಯ ನೋಡಿ ನಾಚಿಸಬಂದೆ**
**ಕಲಕೇತನಲ್ಲಿ ಕೊಳುಕೊಡೆ ಬೇಡ**
**ಮೇಖಲೇಶ್ವರಲಿಂಗದ ಹೊಲಬ ತಿಳಿಯಬಲ್ಲಡೆ''**

ಎಂದು ಹೇಳುವ ಮೂಲಕ ತಂಗಿ ಮತ್ತು ಅಕ್ಕನ ಮಕ್ಕಳ ನಡುವಿನ ವೈವಾಹಿಕ

ಸಂಬಂಧವನ್ನು ಪ್ರಶ್ನಿಸುತ್ತಾನೆ. ಅಕ್ಕನ ಮಗಳನ್ನು ವಿವಾಹವಾಗುವ ಕ್ರಮ ಅಕ್ಕನನ್ನೆ ವಿವಾಹವಾಗುವುದಕ್ಕೆ ಸಮ ಎಂದು ಕಲಕೇತಯ್ಯ ವಿರೋಧಿಸುತ್ತಾನೆ. ಮೊದಲೇ ಹೇಳಿದಂತೆ ನಮ್ಮಲ್ಲಿ ಸಪಿಂಡ (ಗಂಡು ಮತ್ತು ಹೆಣ್ಣಿನ ಪೂರ್ವಜರು ಒಬ್ಬರೆ) ವಿವಾಹ ಪದ್ಧತಿಯನ್ನು ನಿಷೇಧಿಸಲಾಗಿದೆ. ಸಂಬಂಧಗಳ ಪಾವಿತ್ರತೆಯನ್ನು ಕಾಯ್ದುಕೊಳ್ಳುವುದು ಮತ್ತು ಆರೋಗ್ಯದ ದೃಷ್ಟಿಯಿಂದ ಈ ನಿಯಮವನ್ನು ಪಾಲಿಸಿಕೊಂಡು ಬರಲಾಗಿದೆ. ಎಲ್ಲಾ ಬಗೆಯ ರಕ್ತಸಂಬಂಧಗಳಿಗೂ ಇದನ್ನು ಅನ್ವಯಿಸುವ ನಿಟ್ಟಿನಲ್ಲಿ ಆತನ ಚಿಂತನೆ ಇದೆ ಎಂದು ಹೇಳಬಹುದು.

ಗಂಡು ತನ್ನಿಚ್ಛೆಯ ಹೆಣ್ಣನ್ನು ಮೋಹಿಸಿ ವಿವಾಹವಾಗಲು ಇದ್ದಷ್ಟು ಸ್ವಾತಂತ್ರ್ಯ ಹೆಣ್ಣಿಗಿರಲಿಲ್ಲ. ಇಂತಹ ಸ್ತ್ರೀ-ಪುರುಷರ ನಡುವಿನ ತಾರತಮ್ಯವನ್ನು ಗೊಗ್ಗವ್ವೆ ಪ್ರಶ್ನಿಸುತ್ತಾಳೆ. ನಾಸ್ತಿನಾಥನನ್ನು ಅಂಕಿತವನ್ನಾಗಿಸಿಕೊಂಡು ವಚನಗಳನ್ನು ರಚಿಸಿರುವ ಈಕೆಯ ಜೀವನ ವೃತ್ತಾಂತವು ಸಹ ಅಕ್ಕಮಹಾದೇವಿಯ ಜೀವನ ವೃತ್ತಾಂತವನ್ನೇ ಹೋಲುತ್ತದೆ. ಈಕೆ ವೈವಾಹಿಕ ಬದುಕಿನಿಂದ ದೂರ ಉಳಿದು ಧೂಪದ ಕಾಯಕದಲ್ಲಿ ತನ್ನ ತನು-ಮನವನ್ನು ಸವೆಸುತ್ತಾಳೆಂಬುದು ಚರಿತ್ರೆಗಳಿಂದ ತಿಳಿದುಬರುತ್ತದೆ. ಮದುವೆಗೂ ಮುಂಚಿತವಾಗಿ ಗಂಡು, ಹೆಣ್ಣಿನ ಮೇಲೆ ಮೋಹಿತನಾದರೆ ಸಮಾಜ ಒಪ್ಪುತ್ತದೆ. ಹೆಣ್ಣು ಏನಾದರು ಗಂಡನ್ನು ಮೋಹಿಸಿದರೆ ಹೀನ ದೃಷ್ಟಿಯಿಂದ ನೋಡುತ್ತದೆ. ಇಬ್ಬರೂ ಸೃಷ್ಟಿಯ ಮುಂದೆ ಸಮಾನರು, ಆದರೆ ಮಾನವ ನಿರ್ಮಿತ ಸಮಾಜದಲ್ಲಿ ಲಿಂಗ ಅಸಮಾನತೆಗಳಿವೆ ಎಂದು ಗೊಗ್ಗವ್ವೆ ಪ್ರಶ್ನಿಸುತ್ತಾಳೆ.

**“ಗಂಡು ಮೋಹಿಸಿ ಹೆಣ್ಣ ಹಿಡಿದಡೆ**
**ಅದು ಒಬ್ಬರ ಒಡವೆ ಎಂದು ಅರಿಯಬೇಕು**
**ಹೆಣ್ಣು ಮೋಹಿಸಿ ಗಂಡ ಹಿಡಿದಡೆ**
**ಉತ್ತರವಾವುದೆಂದರಿಯ ಬೇಕು?**
**ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ**
**ನಾಸ್ತಿನಾಥನು ಪರಿಪೂರ್ಣನೆಂಬೆ”**

ಎನ್ನುತ್ತಾಳೆ.

ಗಂಡು-ಹೆಣ್ಣಿನ ನಡುವೆ ಸಂಗಾತಿಯ ಆಯ್ಕೆಯಲ್ಲಿರುವ ತಾರತಮ್ಯವನ್ನು ಆಕೆ ವ್ಯಂಗ್ಯವಾಗಿಯೇ ಪ್ರಶ್ನಿಸುತ್ತಾಳೆ. ಗಂಡಿನ ಮೋಹಕ್ಕೆ 'ರಸಿಕ' ಎಂದು ಹೊಗಳುವ ಸಮಾಜ, ಹೆಣ್ಣಿನ ಮೋಹಕ್ಕೆ 'ಲಜ್ಜೆಗೆಟ್ಟವಳು, ವೇಶ್ಯೆ, ಸೂಳೆ' ಎಂದು ದೂರುತ್ತದೆ.

ನಮ್ಮ ಮನಸ್ಸಿಗೆ ಇಷ್ಟವಾದವರನ್ನು ಕಪ್ಪು ಬಿಳಿ ಎಂದು ವರ್ಣದ ಆಧಾರದ ಮೇಲೆ ತಿರಸ್ಕರಿಸಬಾರದು. ಆಂತರಿಕ ಸೌಂದರ್ಯಕ್ಕೆ ಮನಸೋತು ಒಪ್ಪಿದ ಮೇಲೆ, ಬಾಹ್ಯ ಸೌಂದರ್ಯಕ್ಕೆ ಮಣೆಹಾಕಬಾರದು. ಸ್ನೇಹದ ವಿಚಾರವಾಗಿರಲಿ, ಸಂಗಾತಿಯ ವಿಚಾರವಾಗಿರಲಿ ವರ್ಣಕ್ಕೆ ಪ್ರಾಮುಖ್ಯತೆ ನೀಡಬಾರದು. ವಿವಾಹವೆಂಬುದು ಎರಡು ಮನಸ್ಸುಗಳ ಸಮ್ಮಿಲನ. ಹಾಗಾಗಿ ಅಕ್ಕಮಹಾದೇವಿ ವರ್ಣದ ಮಾನದಂಡವನ್ನು

ತಿರಸ್ಕರಿಸುವ ನಿಟ್ಟಿನಲ್ಲಿ,

**"ಕಾಯ ಕರ್‍ರನೆ ಕಂದಿದಡೇನಯ್ಯಾ?**
**ಕಾಯ ಮಿರ್‍ರನೆ ಮಿಂಚಿದಡೇನಯ್ಯಾ**
**ಅಂತರಂಗ ಶುದ್ಧವಾದ ಬಳಿಕ**
**ಚೆನ್ನಮಲ್ಲಿಕಾರ್ಜುನಯ್ಯಾ**
**ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?"**

ಎನ್ನುತ್ತಾಳೆ. ಅಕ್ಕನ ಈ ನಡೆಯನ್ನು ಕೇವಲ ಹೆಣ್ಣು ಮಾತ್ರ ಪಾಲಿಸುವುದಲ್ಲ, ಗಂಡೂ ಕೂಡ ಪಾಲಿಸಬೇಕು. ಇದಕ್ಕೆ ಅಂತರಂಗ ಪರಿಶುದ್ಧವಾಗಿರಬೇಕು. ಅಂತವರ ದಾಂಪತ್ಯ ದೀರ್ಘಕಾಲದವರೆಗೆ ಆರೋಗ್ಯಕರವಾಗಿಯೂ, ಕ್ರಿಯಾಶೀಲವಾಗಿಯೂ ಇರುತ್ತದೆ. ಇಂದಿನ ಬಹುಪಾಲು ಆಯ್ಕೆಯ ಮಾನದಂಡ ಚರ್ಮದ ವರ್ಣ ಆಗಿರುವುದು ದುರಂತದ ಸಂಗತಿಯಾಗಿದೆ.

ಗಂಡು-ಹೆಣ್ಣಿನ ನಡುವೆ ಹೊಂದಾಣಿಕೆ ಸಾಧ್ಯವಾಗಬೇಕಾದರೆ ಅವರಿಬ್ಬರ ಅಭಿರುಚಿಯಲ್ಲಿ ಸಾಮ್ಯತೆ ಇರಬೇಕು. ಇಲ್ಲವಾದರೆ ಸಂಸಾರವೆಂಬುದು 'ಎತ್ತು ಏರಿಗೆಳೆಯಿತು ಕೋಣ ನೀರಿಗೆಳೆಯಿತು' ಎಂಬಂತಾಗುತ್ತದೆ. ಹಾಗಾಗಿ ಹೆಣ್ಣಾಗಲಿ, ಗಂಡಾಗಲಿ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ತಮ್ಮ ಅಭಿರುಚಿಗೆ ಹೊಂದಾಣಿಕೆಯಾಗುವವರಿಗೆ ಆದ್ಯತೆ ನೀಡಬೇಕು. ಇಲ್ಲವಾದರೆ ಬಸವಣ್ಣ ಹೇಳುವಂತೆ,

**"ಗಂಡ ಶಿವಲಿಂಗದೇವರ ಭಕ್ತ,**
**ಹೆಂಡತಿ ಮಾರಿ ಮಸಣಿಕೆಯ ಭಕ್ತೆ**
**ಗಂಡ ಕೊಂಬುದು ಪಾದೋದಕ-ಪ್ರಸಾದ,**
**ಹೆಂಡತಿ ಕೊಂಬುದು ಸುರೆ-ಮಾಂಸ**
**ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ**
**ಹೆಂಡದ ಮಡಕೆಯ ಹೊರಗೆ ತೊಳೆದಂತೆ**
**ಕೂಡಲಸಂಗಮದೇವಾ"**

ಇಲ್ಲಿ ಗಂಡ ಹೆಂಡತಿಯ ಅಭಿರುಚಿಗಳು ಹೊಂದಾಣಿಕೆ ಆಗದಷ್ಟು ಅಂತರವನ್ನು ಸೃಷ್ಟಿಸಿವೆ. ಇಂತಹ ತದ್ವಿರುದ್ಧ ಅಭಿರುಚಿಯುಳ್ಳವರನ್ನು ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವುದು, ಹೆಂಡದ ಮಡಕೆಯನ್ನು ಹೊರಗೆ ತೊಳೆದಂತೆ ನಿಷ್ಪ್ರಯೋಜಕ ಎಂಬುದನ್ನು ಅರಿತುಕೊಳ್ಳಬೇಕು. ಇಂದಿನ ಬಹುತೇಕ ವಿವಾಹಗಳು ವಿಚ್ಛೇದನಗೊಳ್ಳುತ್ತಿರುವಲ್ಲಿ ಅಭಿರುಚಿಯ ವೈರುಧ್ಯವೂ ಪ್ರಮುಖ ಕಾರಣವಾಗಿದೆ.

ವಚನ ಚಳವಳಿಯಲ್ಲಿ ಜಾತಿರಹಿತ ಸಮಾಜ ಸಾಕಾರಗೊಳಿಸಲು ಹೆಚ್ಚು ಹಂಬಲಿಸಿದ ಶರಣ ಬಸವಣ್ಣ. ಆತನ ವಚನವೊಂದರಲ್ಲಿ ಅಂತರ್ಜಾತಿ ವಿವಾಹದ ಕೂಗು ಕೇಳಿಬರುತ್ತದೆ.

**"ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು!**
**ಕುಲವನ್ನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ?**
**ಶಿವಧರ್ಮ ಕುಲೇ ಜಾತಃ ಪುನರ್ಜನ್ಮ ವಿವರ್ಜಿತಃ।**
**ಉಮಾ ಮಾತಾ ಪಿತ ರುದ್ರ ಈಶ್ವರಂ ಕುಲಮೇವ ಚ॥ ಎಂದುದಾಗಿ**
**ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ,**
**ಕೂಡಲ ಸಂಗಮದೇವಾ, ನಂಬುವೆ ನಿಮ್ಮ ಶರಣರನು"**

ಎಂದು ಹೇಳುವಲ್ಲಿ, ಬಸವಣ್ಣನ ಅಂತರ್ಜಾತಿ ಬಗೆಗಿನ ತುಡಿತ ವ್ಯಕ್ತವಾಗುತ್ತದೆ. ವೈವಾಹಿಕ ಸಂಬಂಧಗಳು ಅಂತರ್ಜಾತಿಗಳ ನಡುವೆ ನಡೆಯದ ಹೊರತು ವಿಶ್ವ ಕೌಟುಂಬಿಕ ಪ್ರಜ್ಞೆಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ಅರಿವು ಬಸವಣ್ಣನಲ್ಲಿ ಜಾಗೃತವಾಗಿತ್ತು ಹಾಗಾಗಿ ಇಂದು ವಿಶ್ವಮಾನವನಾಗಿ ಗುರುತಿಸಿಕೊಂಡಿದ್ದಾರೆ.

**ಉಪಸಂಹಾರ:**

ವಿವಾಹ ವ್ಯವಸ್ಥೆಯು ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಅನೇಕ ಮಾರ್ಪಾಡುಗಳನ್ನು ಹೊಂದುತ್ತಾ ರೂಢಿಯಲ್ಲಿದೆ. ಪ್ರಾಚೀನ ಕಾಲದಲ್ಲಿ ಕ್ಲಿಷ್ಟತೆಯಿಂದ ಕೂಡಿದ ವಿವಾಹ ವ್ಯವಸ್ಥೆಯೂ ಶರಣ ಸಮಾಜದಲ್ಲಿ ಸಾಕಷ್ಟು ಬದಲಾವಣೆಗೆ ಒಳಪಟ್ಟಿತು. ಕೇವಲ ಸಂಪ್ರದಾಯದ ಕೂಸಾಗಿ ಬೆಳೆದ ವಿವಾಹ ವ್ಯವಸ್ಥೆಯನ್ನು ಮಾನವೀಯ ನೆಲೆಯಲ್ಲಿ ಸರಳೀಕರಿಸುವ ಪ್ರಯತ್ನವನ್ನು ಶರಣರು ಮಾಡುತ್ತಾರೆ. ಮೌಢ್ಯಗಳ ಕಗ್ಗಂಟಿನಲ್ಲಿ ಸಿಲುಕಿದ ವಿವಾಹ ವ್ಯವಸ್ಥೆಗೆ ಶರಣರಿಂದ ಮುಕ್ತಿ ದೊರೆಯುತ್ತದೆ. ಹಾಗಾಗಿ ವಿವಾಹದಲ್ಲಿ ಗಂಡು ಮತ್ತು ಹೆಣ್ಣಿಗೆ ಸಂಗಾತಿಯ ಆಯ್ಕೆಯ ಸ್ವಾತಂತ್ರ್ಯ ದೊರೆಯುತ್ತದೆ. ವಿವಾಹವಾಗಲು ಜಾತಿಗಿಂತ ಪ್ರೀತಿ ಮುಖ್ಯವಾಗುತ್ತದೆ. ವಿವಾಹವು ಸಮಾನ ಅಭಿರುಚಿಯ ಕಡೆಗೆ ಹೆಚ್ಚು ಒತ್ತು ನೀಡುತ್ತದೆ. ವ್ಯಕ್ತಿಯ ಬಣ್ಣಕ್ಕಿಂತ ವ್ಯಕ್ತಿತ್ವಕ್ಕೆ ಮನ್ನಣೆ ಸಿಗುತ್ತದೆ. ರಕ್ತಸಂಬಂಧಿ ವಿವಾಹದಂತಹ ಅವೈಜ್ಞಾನಿಕ ಪದ್ಧತಿಯು ಪರಿಷ್ಕರಣೆಗೆ ಒಳಪಡುತ್ತದೆ. ಶರಣರು ಸರಳ ವಿವಾಹಕ್ಕೆ ಒತ್ತು ನೀಡುತ್ತಾರೆ. ಆ ಮೂಲಕ ಅಪಾರ ದುಂದುವೆಚ್ಚಕ್ಕೆ ಕಡಿವಾಣ ಹಾಕಿದಂತಾಗಿದೆ. ಶರಣರ ವಿವಾಹ ಪದ್ಧತಿಯು ಗಂಡು ಹೆಣ್ಣಿನ ಮನೋ ಸಮ್ಮಿಲನದ ಸಂಕೇತವಾದ ಶರಣಸತಿ–ಲಿಂಗಪತಿಯೆಂಬ ಆದರ್ಶ ವಿವಾಹವನ್ನು ಪ್ರತಿಪಾದಿಸುತ್ತದೆ. ಶರಣರ ವಿವಾಹ ಪರಿಕಲ್ಪನೆಯು ಜಾತ್ಯತೀತ, ವರ್ಗಾತೀತ, ವರ್ಣಾತೀತ ಹಾಗೂ ಲಿಂಗಾತೀತ ನೆಲೆಯಲ್ಲಿ ರೂಪುಗೊಂಡಿರುವುದರಿಂದ ಪ್ರಸ್ತುತ ಸಮಾಜವು ಶರಣರ ವಿವಾಹ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ. (ಪ್ರ.ಸಂ), (2016), ಬಸವಯುಗದ ವಚನ ಮಹಾಸಂಪುಟ–1 (ಸಿದ್ಧರಾಮೇಶ್ವರ, ಚೆನ್ನಬಸವಣ್ಣ ಮತ್ತು ಬಸವಣ್ಣನವರ ವಚನಸಂಪುಟಗಳು), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
2. ಕಲಬುರ್ಗಿ ಎಂ.ಎಂ. (ಪ್ರ.ಸಂ), (2016), ಬಸವೋತ್ತರ ಯುಗದ ವಚನ ಮಹಾಸಂಪುಟ–2 (ಸಂಕೀರ್ಣ ವಚನಸಂಪುಟ ಏಳು), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಕೃಷ್ಣ. ಬಿ.ಆರ್, (1997), ಭಾರತೀಯ ಸಮಾಜದ ಸಮಾಜಶಾಸ್ತ್ರ, ಮೈಸೂರು: ಚೇತನ ಬುಕ್‌ಹೌಸ್.
4. ಕೃಷ್ಣ. ಬಿ.ಆರ್, (1984), ಭಾರತೀಯ ಸಾಮಾಜಿಕ ಅಧ್ಯಯನ, ಗದಗ: ವಿದ್ಯಾನಿಧಿ ಪ್ರಕಾಶನ.
5. ಶಿವಾರೆಡ್ಡಿ ಕೆ.ಸಿ, (2004), ಕುವೆಂಪು ಸಮಗ್ರ ಗದ್ಯ ಸಂಪುಟ–2, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಶ್ರೀಕಂಠಕುಮಾರಸ್ವಾಮಿ ಆರ್.ಕೆ., (2012), ಸರಳ ವಿವಾಹ ಮತ್ತು ಶಾಸ್ತ್ರಗಳು, ಮೈಸೂರು: ತನುಮನು ಪ್ರಕಾಶನ.
7. ಸಂಗಮೇಶ ಸವದತ್ತಿಮಠ (ಸಂ), (2015), ವಿಷಯ ವಚನ ಸಂಪುಟಗಳು ಸಂಪುಟ–8, ಬೀದರ್: ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ.
8. ಶೈಲಜಾ ಉಡಚಣ, (1993), ವಚನಗಳಲ್ಲಿ ಸತಿಪತಿ ಭಾವ, ಗುಲಬರ್ಗಾ: ಗ್ರಿನೋಬಲ್ಸ್ ಪ್ರಕಾಶನ.